Opposition members are threatening the Government. If he threatens us we will retort, otherwise we do nothing and simply co-operate with them. We want your protection in this connection because they are the Government. He must behave as a Minister. He should withdraw what he said now.

Madam SPEAKER.—All should behave well. May I know what he said in this connection.

Sri C. M. ARUMUGAM.—I will have my say after the Chief Minister's statement.

Sri D. DEVARAJ URS.—There is nothing to have a say. You are unnecessarily getting touchy about certain matters.

Sri C. M. ARUMUGAM.—Every time Sri K. H. Patil is saying that we are threatening, he is suggesting indirectly that we are not

Sri D. DEVARAJ URS.—Why don't you have patience? You are a good debator. In a debate one must be sufficiently eloquent to retaliate. What is there to withdraw? Only when we go out of the way and use unparliamentary or abusive language or say anything that should not have been said or when the Speaker feels that certain things shoud not be said, certainly it should be withdrawn. Many a time we raise our voice when we talk and many a time while one Member has to get up, 10 Members get up. If somebody points out that you should not get up, these things need not be taken too seriously. He is a labour leader—and labour leaders do not get upset over such small things. A leader like Sri C. M. Arumugam should not get touchy or worried over it. He has got the power of his tongue and power of dialogue. He can deal with anybody in the manner be likes through his tongue and eloquence. That is always there. So, we can proceed with this.

ಶ್ರೀ ಎಸ್. ಬಂಗಾರಪ್ಪ.—ಈ ಸಭೆ ಮುಗಿಯುವುದರೊಳಗೆ ಆ ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಇಡುತ್ತಾರೆಯೇ?

ಅಧ್ಯಕ್ಷರು.—ನಾನು ಈಗಾಗಲೇ ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ. ಆದ್ದರಿಂದ ಈಗ ತಮ್ಮ ಪ್ರಶ್ನೆ ಬರುವುದಿಲ್ಲ.

IMPROVEMENT OF SERVICE CONDITIONS OF PUBLIC PROSECUTORS.

259. Sri S. KARIYAPPA (Kanakapura).—

Will the Minister for Law and Parliamentary Affairs be pleased to state :—

(*a*) whether any representations have been made by Public Prosecutors regarding the improvement of their service conditions;

(SRI S. KARIYAPPA)

(*b*) if so, the action taken on their representation;

(*c*) the representations considered and those in the process of being considered?

Sri D. K. NAIKAR (Minister for Law and Parliamentary Affairs).—

(*a*) Yes.

(*b*) and (*c*) Orders revising the scales of fees and retainer payable to Government Pleaders and Public Prosecutors in the State with effect from 1st October 1972 have been issued in G.O. No. LAW 55 LAG 72, dated 30th September 1972.

ಶ್ರೀ ಎಸ್. ಕರಿಯಪ್ಪ.—ಪಬ್ಲಿಕ್ ಪ್ರಾಸಿಕ್ಯೂಟರುಗಳು ತಮ್ಮ ಸೇವಾ ಷರತ್ತುಗಳನ್ನು ಉತ್ತಮಪಡಿಸುವ ಬಗ್ಗೆ ಕೊಟ್ಟಿರತಕ್ಕ ಮನವಿ ಪತ್ರದಲ್ಲಿ ಕೇಳಿಕೊಂಡಿರತಕ್ಕ ಕೋರಿಕೆಗಳು ಯಾವವು?

†ಶ್ರೀ ಡಿ. ಕೆ. ನಾಯ್ಕರ್.—ಅವರು ತಮ್ಮ ಮನವಿಯಲ್ಲಿ ರೆಮ್ಯುನರೇಷನ್ ರೇಟನ್ನು ಹಾಸ್ಟಿ ಮಾಡಬೇಕೆಂದು ಕೇಳಿದ್ದಾರೆ. ಆ ಪ್ರಕಾರ ಈಗಾಗಲೇ ಅದನ್ನು ವಿಚಾರ ಮಾಡಿ ಅದರ ಬಗ್ಗೆ ನಾವು ಕ್ರಮ ಕೈಗೊಂಡಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಮೊದಲು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಇದ್ದ ಸಂಬಳವೇನು ಮತ್ತು ತಮ್ಮ ಸರ್ಕಾರದ ಆರ್ಡರ್ ಆದಮೇಲೆ ಎಂದರೆ 1-10-72 ರಿಂದ ಅವರಿಗೆ ಎಷ್ಟು ಸಂಬಳ ಆಗಿದೆ?

ಶ್ರೀ ಡಿ. ಕೆ. ನಾಯ್ಕರ್.—ನಮ್ಮ ಹುಕುಂ ಆಗುವುದಕ್ಕಿಂತ ಮುಂಚೆ ಅವರಿಗೆ ಮಾಗ್ಜಿಮಮ್ ಸಂಬಳ 700 ರೂಪಾಯಿಗಳು ಸಿಕ್ಕುತ್ತಿತ್ತು. ಅದನ್ನು ಈಗ ಒಂದು ಸಾವಿರ ರೂಪಾಯಿಗಳಿಗೆ ಏರಿಸಿದೆ. ಮತ್ತು ಸೆಷನ್ ಕೇಸಿನಲ್ಲಿ ಕ್ರಿಮಿನರ್ ಅಪೀಲ್ ನಡೆಸಿದರೆ ಒಂದು ದಿವಸಕ್ಕೆ 20 ರೂಪಾಯಿಗಳನ್ನು ಕೊಡಬೇಕೆಂದು ಇತ್ತು. ಈಗ ಅದನ್ನು 40 ರೂಪಾಯಿಗಳಿಗೆ ಏರಿಸಿದ್ದೇವೆ. ಮೊದಲು ಅವರಿಗೆ ಮಿನಿಮಮ್ ಸಂಬಳ ಇರಲಿಲ್ಲ. ಈಗ ಮಿನಿಮಮ್ ಸಂಬಳವನ್ನು 350 ರೂಪಾಯಿಗಳನ್ನು ಗೊತ್ತುಮಾಡಿದ್ದೇವೆ. ರಿಟನ್ ಫೀಜನ್ನು 150 ರೂಪಾಯಿಗಳಿಂದ 250 ರೂಪಾಯಿಗಳಿಗೆ ಏರಿಸಿದೆ.

ಶ್ರೀ ಎಸ್. ಕರಿಯಪ್ಪ.—ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಸೀನಿಯಾರಿಟಿ ಲಿಸ್ಟನ್ನು ಸ್ಟೇಟ್ ವೈಸ್ ಅಥವಾ ಡಿವಿಜನರ್‌ವೈಸ್ ಮೇಂಟೇನ್ ಮಾಡಿದ್ದೀರಾ?

ಶ್ರೀ ಡಿ. ಕೆ. ನಾಯ್ಕರ್.—ಪಬ್ಲಿಕ್ ಪ್ರಾಸಿಕ್ಯೂಟರುಗಳ ಸೀನಿಯಾರಿಟಿ ಲಿಸ್ಟನ್ನು ನಾವು ಮೇಂಟೇನ್ ಮಾಡಿಲ್ಲ. ಏತಕ್ಕೆಂದರೆ ಅದು ಪೀರಿಯಾಡಿಕರ್ ಅಪಾಯಿಂಟ್‌ಮೆಂಟ್. ಮತ್ತ ರೆಕಮೆಂಡೇಷನ್ ಮೇರೆ ಆ ಅಪಾಯಿಂಟ್‌ಮೆಂಟ್ ಮಾಡುವುದರಿಂದ ಅವರ ಸೀನಿಯಾರಿಟಿ ಲಿಸ್ಟನ್ನು ಮೇಂಟೇನ್ ಮಾಡಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ಮತ್ತು ಗವರ್ನ್‌ಮೆಂಟ್ ಪ್ಲೀಡರುಗಳನ್ನು ನೇಮಕ ಮಾಡುವಾಗ ಹೆಚ್ಚು ಶಿಫಾರಸ್ಸಿನ ಒತ್ತಡದಮೇರೆ ಮಾಡುತ್ತಿದ್ದಾರೆ ಎಂದು ನಮಗೆ ಸಾಕಷ್ಟು ಅನುಭವವಾಗಿದೆ. ಆದ್ದರಿಂದಲೇ ಸರ್ಕಾರದ ಕೇಸುಗಳು ಹೋಗುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಇನ್ನು ಮುಂದೆ ಅರ್ಹತೆಯ ಮೇಲೆ ಆ ಹುದ್ದೆಗಳ ನೇಮಕ ಮಾಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ತಾವು ಹೇಳಿದ ಪ್ರಕಾರ ಮಾಡತಕ್ಕಂಥಾದ್ದು ಯಾವುದು ನಮ್ಮ ಗಮನಕ್ಕೆ ಬಂದಿಲ್ಲ. ಆ ರೀತಿ ಆಗಿಲ್ಲ. ಅವರ ನೇಮಕದ ವಿಷಯದಲ್ಲಿ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಜಡ್ಜ್ ಯಾರನ್ನು ಶಿಫಾರಸ್ಸು ಮಾಡುತ್ತಾರೆಯೋ ಅಂಥವರನ್ನು ಆ ಹುದ್ದೆಗಳಿಗೆ ನೇಮಕ ಮಾಡಲಾಗುತ್ತಿದೆ.

ಒಬ್ಬ ಸದಸ್ಯರು.—ಪಾಪರ್ ಕೇಸುಗಳನ್ನು ನಡೆಸತಕ್ಕವರಿಗೆ ಶುಲ್ಕವನ್ನು ಹೆಚ್ಚು ಮಾಡಿದ್ದೀರಾ ಹೇಗೆ ?

ಶ್ರೀ ಡಿ. ಕೆ. ನಾಯ್ಕರ್.—ಸೆಷನ್ ಕೇಸುಗಳನ್ನು ನಡೆಸುವಾಗ ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಏನು ಡೈಲಿ ಅಲೋಯೆನ್ಸ್ ಕೊಡುತ್ತಾರೆಯೋ ಅದನ್ನು ಈ ಪಾಪರ್ ಕೇಸುಗಳನ್ನು ನಡೆಸತಕ್ಕ ಪ್ಲೀಡರುಗಳಿಗೂ ಕೊಡುತ್ತಾರೆ. ಈಗ ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಸೆಷನ್ ಕೇಸನ್ನು ನಡೆಸುವಾಗ ಒಂದ ದಿವಸಕ್ಕೆ 40 ರೂಪಾಯಿಗಳನ್ನು ಕೊಡಲಾಗುತ್ತದೆ. ಅದೇ ರೇಟನ್ನು ಈ ಪಾಪರ್ ಕೇಸನ್ನು ನಡೆಸತಕ್ಕ ಪ್ಲೀಡರುಗಳಿಗೂ ಕೊಡಲಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಇವು ಬಹಳ ಮುಖ್ಯವಾದ ಹುದ್ದೆಗಳು. ಆದ್ದರಿಂದ ಇವರುಗಳ ಸೀನಿಯಾರಿಟಿ ಲಿಸ್ಟ್ ಅನ್ನು ಮೇಂಟೇನ್ ಮಾಡುವುದು ಸರಿಯಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ನಾನು ಈಗಾಗಲೇ ಹೇಳಿದ ಹಾಗೆ ಅದು ಪೀರಿಯಾಡಿಕಲ್ ಅಪಾಯಿಂಟ್‌ಮೆಂಟ್. ಅದು ನಾಲ್ಕು ವರ್ಷ ಮಾತ್ರ ಇರುತ್ತದೆ. ಆ ಹುದ್ದೆಗೆ ಪೆನ್‌ಷನ್ ಮತ್ತು ಗ್ರಾಚ್ಯುಯಿಟಿ ಯಾವುದೂ ಸಿಕ್ಕುವುದಿಲ್ಲ. ಆದ್ದರಿಂದ ಆ ಹುದ್ದೆಗಳ ಸೀನಿಯಾರಿಟಿ ಪಟ್ಟಿಯನ್ನು ಮೇಂಟೇನ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ರಾಜ್ಯದ ಗವರ್ನ್‌ಮೆಂಟ್ ಪ್ಲೀಡರ್ಸ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಸಂಬಳ ನೆರೆ ರಾಜ್ಯಗಳಿಗಿಂತ ಕಡಿಮೆ ಇದೆಯೆಂದು ತಮಗೆ ದೂರು ಬಂದಿಲ್ಲವೆ ? ಮತ್ತು ನೆರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಅವರಿಗೆ ಸಂಬಳ ಕಡಿಮೆ ಇದ್ದರೆ ಅದನ್ನು ನೆರೆ ರಾಜ್ಯದವರ ಮಟ್ಟಕ್ಕೆ ತರುವುದಕ್ಕೆ ತಾವು ತಯಾರಾಗಿದ್ದೀರಾ ?

ಶ್ರೀ ಡಿ. ಕೆ. ನಾಯ್ಕರ್.—ನಮ್ಮ ರಾಜ್ಯದ ಗವರ್ನ್‌ಮೆಂಟ್ ಪ್ಲೀಡರುಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರುಗಳಿಗೆ ಸಂಬಳ ನೆರೆ ರಾಜ್ಯಗಳಿಗಿಂತ ಕಡಿಮೆ ಇದೆಯೆಂದು ನಮಗೆ ಯಾವ ದೂರು ಬಂದಿಲ್ಲ. ಪಬ್ಲಿಕ್ ಪ್ರಾಸಿಕ್ಯೂಟರು ಮತ್ತು ಗವರ್ನ್‌ಮೆಂಟ್ ಪ್ಲೀಡರುಗಳಿಗೆ ಅವರ ಸ್ಥಿತಿಗತಿಗಳಿಗೆ ಅನುಗುಣವಾಗಿ ಸಂಬಳವನ್ನು ಏರಿಸಿದ್ದೇವೆ. ಆ ಬಗ್ಗೆ ನಾವು ಅಡ್ವೋಕೇಟ್ ಜನರಲ್ ಅವರನ್ನೂ ಕೂಡ ಕನ್‌ಸರ್ಟ್ ಮಾಡಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ಈಗ ಇರತಕ್ಕ ಪಬ್ಲಿಕ್ ಪ್ರಾಸಿಕ್ಯೂಟರುಗಳು ಕೋಮು ವಾರು ಭಾವನೆಯನ್ನು ಹುಟ್ಟಿಸುತ್ತಾರೆ ಎಂದು ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಬಂದಿದ್ದರೂ ಕೂಡ ಅವರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ಅಂಥಾ ರಿಪೋರ್ಟ್ ನಮ್ಮ ಕಡೆ ಯಾವುದೂ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಡಿಸ್ಟ್ರಿಕ್ಟ್‌ಮೆಜಿಸ್ಟ್ರೇಟ್ ಮತ್ತು ಡಿವಿಜನರ್‌ಮೆಜಿಸ್ಟ್ರೇಟ್ ಈ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಈ ಅಧಿಕಾರಿಗಳು ಸರ್ಕಾರಿ ನೌಕರರ ಹಾಗೆ ಕಂಪ್ಲೀಟಾಗಿ ಸರ್ವೀಸಿನಲ್ಲಿ ಇರುವುದಿಲ್ಲ. ಆದ್ದರಿಂದ ಇವರಿಗೆ ಸೀನಿಯಾರಿಟಿ ಲಿಸ್ಟನ್ನು ಮೇಂಟೇನ್ ಮಾಡುವುದ ಕ್ಯಾಗಾವುದಿಲ್ಲ. ಹೆಚ್ಚು ಅನುಭವ ಇರತಕ್ಕ ವಕೀಲರನ್ನು ಯಾರನ್ನು ಡೆಪ್ಯೂಟಿ ಕಮೀಷನರು ಮತ್ತು ಡಿಸ್ಟ್ರಿಕ್ಟ್ ಜಡ್ಜ್ ರೆಕಮೆಂಡ್ ಮಾಡುತ್ತಾರೆಯೋ ಅಂಥವರನ್ನು ಮಾತ್ರ ಪಬ್ಲಿಕ್ ಪ್ರಾಸಿಕೂಟರ್ ಮತ್ತು ಗವರ್ನ್‌ಮೆಂಟ್ ಪ್ಲೀಡರ್ ಆಗಿ ನೇಮಕ ಮಾಡುತ್ತೇವೆ. ಅದರಲ್ಲಿ ಏನಾದರೂ ಪಾರ್ಸಿಯಾಲಿಟಿ ನಡೆಯುತ್ತದೆ ಎಂದರೆ ಆ ಬಗ್ಗೆ ನಾವು ಕಾಳಜಿ ತೆಗೆದುಕೊಳ್ಳುತ್ತೇವೆ.

LOANS GIVEN TO PRIVATE INDUSTRIES IN SOUTH KANARA.

265. Sri A. G. KODGI (Baindur) —

Will the Minister for Industries be pleased to state :—

The total amount of loans given to Industries to private sector in South Kanara and the names of the industries or the persons to whom the loans are given and the amount of loans given to them ?